# ಸಮಾಜ ವಿಜ್ಞಾನ

**ತರಗತಿ : 10 ನೇ ತರಗತಿ** **ಮಾದರಿ ಪ್ರಶ್ನೆ ಪತ್ರಿಕೆ –4** **ಅಂಕಗಳು : 80**

**ವಿಷಯ: ಸಮಾಜ ವಿಜ್ಞಾನ (85k)** **ಸಮಯ : 3–15 ನಿಮಿಷ.**

**I ಬಹು ಆಯ್ಕೆ ಪ್ರಶ್ನೆಗಳು 8*1=8**

1) ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಮರು ನಾಮಕರಣ ಮಾಡಿದ ವರ್ಷ – **ಡಿ) 1973**

2) ತೀನ ಮೂರ್ತಿ ಚೌಕ ಇರುವ ಸ್ಥಳ – **ಎ) ದೆಹಲಿ.**

3) ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ತರಲು ಕಾರಣ – **ಎ) 6–14 ವರ್ಷದ ಮಕ್ಕಳಿಗೆ ಶಿಕ್ಷಣ ಕಡ್ಡಾಯಗೊಳಿಸಲು**

4) ಶ್ರಮವಿಭಜನೆಗೆ ಪ್ರಮುಖ ಕಾರಣ – **ಡಿ) ವಿಶೇಷ ಪರಿಣತಿ**

5) ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಿದ ಸ್ಥಳ – **ಎ) ರಾಜಸ್ತಾನದ ಬಾರ್‌ಮರ್.**

6) ಭಾರತದ ಪ್ರಾದೇಶಿಕ ಮತ್ತು ಸ್ವತಂತ್ರ ಜಿ.ಪಿ.ಎಸ್. ವ್ಯವಸ್ಥೆಗೆ ಇಡಲಾದ ಹೆಸರು – **ಸಿ) ನಾವಿಕ್.**

7) ಭಾರತದ ಆರ್ಥಿಕ ಯೋಜನೆಯ ಪಿತಾಮಹ – **ಬಿ) ಸರ್.ಎಂ.ವಿಶ್ವೇಶ್ವರಯ್ಯ.**

8) ಉದ್ಯಮಿ ಎಂಬ ಪದವು ಫ್ರೆಂಚ್ ಭಾಷೆಯ ಈ ಪದದಿಂದ ಬಂದಿದೆ – **ಡಿ) ಎಂಟ್ರ ಪ್ರೆಂಡೆ**

**II ಒಂದು ವಾಕ್ಯದಲ್ಲಿ ಉತ್ತರಿಸಿರಿ. 8*1=08**

**9) ರಾಜ್ಯ ಪುನರ್ ವಿಂಗಡಣಾ ಆಯೋಗದ ಅಧ್ಯಕ್ಷರು ಯಾರು?**
**ಉತ್ತರ:** ಫಜಲ್ ಅಲಿ.

**10) ಮೊದಲನೆ ಮಹಾಯುದ್ಧವನ್ನು ಅಂತ್ಯಗೊಳಿಸಿದ ಒಪ್ಪಂದ ಯಾವುದು?**
**ಉತ್ತರ:** ವರ್ಸೆಲ್ಸ್ ಒಪ್ಪಂದ

**11) ಗೋವಾ ವಿಮೋಚನಾ ಸಂದರ್ಭದಲ್ಲಿ ವಿಶ್ವಸಂಸ್ಥೆಯಲ್ಲಿ ಸಹಕಾರ ನೀಡಿದ ದೇಶ ಹೆಸರಿಸಿ.**
**ಉತ್ತರ:** ರಷ್ಯಾ.

**12) ವರದಕ್ಷಿಣೆ ಮಹಿಳೆಯರನ್ನು ಶೋಷಿಸುತ್ತದೆ.ಹೇಗೆ?**
**ಉತ್ತರ:** ಮಹಿಳಾ ಹಕ್ಕುಗಳನ್ನು ಉಲ್ಲಂಘಿಸುತ್ತದೆ.

**13) ಹೆಣ್ಣು ಶಿಶು ಹತ್ಯೆ ಎಂದರೇನು?**
**ಉತ್ತರ:** ಜನನದ ನಂತರ ಹೆಣ್ಣು ಮಗುವನ್ನು ಹತ್ಯೆ ಮಾಡುವ ಪದ್ಧತಿ.

**14) ಹಿಮಾಲಯ ಪರ್ವತಗಳಲ್ಲಿ ಆಗಿಂದಾಗ್ಗೆ ಕ್ಷಿಪ್ರ ಪ್ರವಾಹಗಳು ಉಂಟಾಗಲು ಕಾರಣವೇನು?**
**ಉತ್ತರ:** ಮೇಘಸ್ಫೋಟದಿಂದ ಉಂಟಾಗುತ್ತವೆ.

**15) ಲೋಕಸಭೆಯಲ್ಲಿ ಕೇಂದ್ರ ಆಯ–ವ್ಯಯವನ್ನು ಯಾರು ಮಂಡಿಸುವವರು?**
**ಉತ್ತರ:** ಹಣಕಾಸು ಸಚಿವರು.

**16) ಠೇವಣಿ ಹಣವನ್ನು ಯಾವ ಖಾತೆಯಲ್ಲಿ ನಿಗಧಿತ ಅವಧಿಗೆ ಮುಂಚೆ ಹಿಂಪಡೆಯಲು ಸಾಧ್ಯವಿಲ್ಲ?**
**ಉತ್ತರ:** ನಿಶ್ಚಿತ ಠೇವಣಿ ಖಾತೆ.

**III ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ. 8*2=16**

**17) ರಾಮಕೃಷ್ಣ ಮಿಷನ್‌ನ ದೃಷ್ಟಿಕೋನವನ್ನು ವಿವರಿಸಿ.**

- ಎಲ್ಲಾ ಪಂಥಗಳು ಸಮಾನ.
- ಆಧ್ಯಾತ್ಮದ ಸಾಕ್ಷಾತ್ಕಾರ ಮುಖ್ಯ.
- ವಿಗ್ರಹಾರಾಧನೆಯಲ್ಲಿ ನಂಬಿಕೆ.
- ನಿಸ್ವಾರ್ಥ ದೈವಭಕ್ತಿ.
- ಸಂಸ್ಕೃತಿಯ ಬೆಳವಣಿಗೆ.
- ಪರಮಹಂಸರ ಧ್ಯೇಯಾದರ್ಶಗಳ ಪ್ರಚಾರ.
- ಪ್ರಾರ್ಥನೆ, ಯೋಗ, ಸಮಾಜಸೇವೆಗೆ ಆದ್ಯತೆ.

**18) 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಿರೀಕ್ಷಿತ ಯಶಸ್ಸನ್ನು ತರಲಿಲ್ಲ. ಕಾರಣ ಕೊಡಿ.**

- ದಂಗೆ ಭಾರತದಾದ್ಯಂತ ವ್ಯಾಪಿಸಿರಲಿಲ್ಲ.
- ಸ್ವಹಿತಾಸಕ್ತಿ & ಹಕ್ಕಿಗಾಗಿ ನಡೆದ ಹೋರಾಟ.
- ಯೋಜಿತ ದಂಗೆಯಾಗಿರಲಿಲ್ಲ.
- ಅನಿರೀಕ್ಷಿತ ಕಾರಣಗಳಿಂದ ಪ್ರೇರಿತವಾಗಿತ್ತು.
- ಭಾರತೀಯ ಸೈನಿಕರಲ್ಲಿನ ಭಿನ್ನತೆ.
- ಸೂಕ್ತ ಮಾರ್ಗದರ್ಶನ, ಸಂಘಟನೆಯ ಕೊರತೆ.
- ಸೇನಾ ನಾಯಕತ್ವ, ಮತ್ತು ಶಿಸ್ತಿನ ಕೊರತೆ.
- ಯುದ್ಧತಂತ್ರ, ಸೈನಿಕ ಪರಿಣತಿ ಇರಲಿಲ್ಲ.
- ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.
- ದೇಶೀಯ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆ.
- ಸೈನಿಕರು ಜನರ ವಿಶ್ವಾಸ ಕಳೆದುಕೊಂಡರು.

**19) ಲಾಭ ಬಡುಕತನದಿಂದ ಉತ್ಪಾದಕ ಮತ್ತು ಗ್ರಾಹಕನಿಗೆ ನಷ್ಟವಾಗುತ್ತದೆ. ಈ ಹೇಳಿಕೆಯನ್ನು ಸಮರ್ಥಿಸಿರಿ.**

- ಆರ್ಥಿಕ ಅಸಮಾನತೆ.
- ಬಡತನ ಹೆಚ್ಚಳ.
- ಸಮಾಜದಲ್ಲಿ ಅಪರಾಧಗಳ ಏರಿಕೆ.
- ಅನೈತಿಕ ವ್ಯಾಪಾರ ವಹಿವಾಟಿಕೆ ಪ್ರಚೋದನೆ.
- ಹಣದುಬ್ಬರಕ್ಕೆ ಕಾರಣ.
- ಜನರ ಆದಾಯ ಸೀಮಿತ ಶ್ರೀಮಂತ ವ್ಯಾಪಾರಿಗಳ ಪಾಲು.
- ಬೆಲೆಗಳ ಮೇಲೆ ಹತೋಟಿ ತಪ್ಪುತ್ತದೆ.

**ಅಥವಾ**

**ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಸಂರಕ್ಷಣೆಗೆ ಪ್ರಯತ್ನಿಸುತ್ತಿದೆ ಎಂದು ಹೇಗೆ ಹೇಳುವಿರಿ?**

- ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ.
- ಗುಲಾಮಗಿರಿಗೆ ವಿರೋಧ.
- ಮಾನವರ ಮಾರಾಟ ನಿಷೇಧ.

- ಮಕ್ಕಳ ದುಡಿಮೆಗೆ ವಿರೋಧ.
- ಮಹಿಳಾ ಶೋಷಣೆಗೆ ತಡೆ.

**20) ತಾರತಮ್ಯದಿಂದ ಉಂಟಾಗುವ ಪೂರ್ವಾಗ್ರಹವು ಯಾವ ಭಾವನೆಗಳನ್ನು ಬೆಳೆಸುತ್ತದೆ?**

- ಅಸಹನೆ.
- ತಿರಸ್ಕಾರ.
- ಅಗೌರವ.
- ದ್ವೇಷ

**ಅಥವಾ**

**ಜನಮಂದೆಯ ಸ್ವರೂಪವನ್ನು ವಿವರಿಸಿರಿ.**

- ತಾತ್ಕಾಲಿಕ ಸ್ವರೂಪದ ಸಮೂಹ.
- ಜನರು ನಿರ್ದಿಷ್ಟ ಸ್ಥಳದಲ್ಲಿ ಭೌತಿಕವಾಗಿ ಸೇರಿದ ಗುಂಪು.
- ಸದಸ್ಯರು ಬೇಗನೇ ಅಭಿಪ್ರಾಯ, ಭಾವನೆ, ಕ್ರಿಯೆಗಳ ಪ್ರಭಾವಕ್ಕೆ ಒಳಗಾಗುತ್ತಾರೆ.
- ವ್ಯಕ್ತಿಯ ಆಂತರಿಕ ಭಾವನೆಗಳ ಪ್ರಕಟ.
- ಕೆಲವೊಮ್ಮೆ ಭಾವನೆಗಳು ಸ್ಫೋಟಗೊಳ್ಳುವವು.

**21) ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳು ಯಾವುವು?**

- ಅರಬ್ಬಿ ಸಮುದ್ರ ಶಾಖೆ,
- ಬಂಗಾಳ ಕೊಲ್ಲಿ ಶಾಖೆ.

**22) ವಿವಿಧೋದ್ದೇಶ ನದಿ ಕಣಿವೆ ಯೋಜನೆ ಉದ್ದೇಶಗಳೇನು?**

- ನೀರಾವರಿ ಸೌಲಭ್ಯ.
- ಜಲವಿದ್ಯುಚ್ಛಕ್ತಿ ಉತ್ಪಾದನೆ.
- ನದಿ ಪ್ರವಾಹ ನಿಯಂತ್ರಣ.
- ನೌಕಾಯಾನ.
- ಗೃಹ ಬಳಕೆ.
- ಕೈಗಾರಿಕೆಗೆ ಬಳಕೆ.
- ಮಣ್ಣಿನ ಸವೆತ ನಿಯಂತ್ರಣ.
- ಮೀನುಗಾರಿಕೆ.
- ಅರಣ್ಯ ಸಂಪತ್ತು ವೃದ್ಧಿ.

**23) ಗ್ರಾಮೀಣಾಭಿವೃದ್ಧಿಗಾಗಿ ಅಸ್ತಿತ್ವದಲ್ಲಿರುವ ವಿವಿಧ ಯೋಜನೆಗಳಾವುವು?**

- ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ.
- ಸ್ವರ್ಣಜಯಂತಿ ಗ್ರಾಮ ಸ್ವ–ಉದ್ಯೋಗ ಯೋಜನೆ.
- ಇಂದಿರಾ ಆವಾಸ್ ಯೋಜನೆ.
- ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ.
- ಆಶ್ರಯ ಯೋಜನೆ.

**24) ಗ್ರಾಹಕ ನ್ಯಾಯಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳು ಯಾವುವು?**

- ದೂರಿನ ಕೈಬರಹ ಅಥವಾ ಬೆರಳಚ್ಚು ಪ್ರತಿ.
- ದೂರು ಕೊಡುವವನ ಪೂರ್ಣ ವಿಳಾಸ.
- ದೂರಿನ ವ್ಯಾಪಾರಿಯ ಪೂರ್ಣ ಮಾಹಿತಿ.
- ಯಾವ ವಸ್ತು ನಷ್ಟವಾಗಿದೆ. & ಬೆಲೆ.
- ನಷ್ಟ ಪರಿಹಾರದ ಮೊತ್ತ ಲಗತ್ತಿಸಬೇಕು.
- ವಸ್ತುವಿನ ರಸೀದಿ ಅಥವಾ ಬಿಲ್ಲು.
- ದೂರಿಗೆ ನೊಂದಣಿ ಶುಲ್ಕವಿಲ್ಲ

**IV ಐದು–ಆರು ವಾಕ್ಯದಲ್ಲಿ ಉತ್ತರಿಸಿರಿ. 9*3=27**

**25) ಬಕ್ಸಾರ್ ಕದನದ ಪರಿಣಾಮಗಳೇನು?**

- ಮೀರ್ ಖಾಸಿಂನ ಸಂಯುಕ್ತ ಸೇನೆಗೆ ಸೋಲು.
- 2ನೇ ಷಾ ಆಲಂ ಕಂಪನಿಗೆ ದಿವಾನಿ ಹಕ್ಕು ನೀಡಿದ.
- ಷಾ ಆಲಂ ಬಂಗಾಳದ ಎಲ್ಲ ಹಕ್ಕನ್ನು ಬಿಟ್ಟನು.
- ಔದ್ ನವಾಬ 50 ಲಕ್ಷ ಯುದ್ದ ನಷ್ಟ ನೀಡಿದ.
- ಮೀರ್ ಜಾಫರ್‌ನ ಮಗನಿಗೆ ವಿಶ್ರಾಂತಿ ವೇತನ.
- ಬಂಗಾಳ, ಬಿಹಾರ, ಓರಿಸ್ಸಾ, ಔದ ಬ್ರಿಟಿಷರ ವಶ.
- ಬ್ರಿಟಿಷರು ಬಂಗಾಲದ ನಿಜವಾದ ಒಡೆಯರಾದರು. **ಅಥವಾ**

**3ನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣ & ಪರಿಣಾಮ ತಿಳಿಸಿ.**

➢ **ಕಾರಣಗಳು**

- ಮರಾಠರಿಂದ ಘನತೆ & ಸ್ವಾತಂತ್ರ್ಯ ಉಳಿಸಿಕೊಳ್ಳುವ ಯತ್ನ.
- ಬ್ರಿಟಿಷರ ನಿಯಂತ್ರಣದಿಂದ ಪೇಶ್ವೆ ಹೊರಬರುವ ಪ್ರಯತ್ನ.
- ಬ್ರಿಟಿಷ ರೆಸಿಡೆನ್ಸಿ ಮೇಲೆ ಪೇಶ್ವೆಯಿಂದ ದಾಳಿ.

➢ **ಪರಿಣಾಮಗಳು.**

- ಪೇಶ್ವೆ ಪದವಿ ರದ್ಧತಿ.
- ಬಾಜೀರಾಯನಿಗೆ ವಿಶ್ರಾಂತಿ ವೇತನ ನಿಗದಿ.
- ಸತಾರದಲ್ಲಿ ಬ್ರಿಟಿಷರಿಂದ ಪ್ರತಾಪಸಿಂಹನ ಪ್ರತಿಷ್ಠಾಪನೆ.

**26) ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿವರಿಸಿರಿ**

- ಕಿತ್ತೂರಿನ ಸ್ವತಂತ್ರವೇ ರಾಯಣ್ಣನ ಆದ್ಯ ಕರ್ತವ್ಯ.
- ಕಿತ್ತೂರು ಯುದ್ಧದಲ್ಲಿ ಚೆನ್ನಮ್ಮನ ಪರ ಹೋರಾಟ.
- ಗುಪ್ತ ಸಭೆ, ಸೈನಿಕರ ಸಂಘಟನೆ ಕೈಗೊಂಡನು.
- ನಂದಗಡ, ಖಾನಾಪುರ, ಸಂಪಗಾವಿ ಕಾರ್ಯಾಚರಣೆ ಸ್ಥಳಗಳು.
- ಕಿತ್ತೂರಿನ ಸ್ವಾತಂತ್ರ್ಯದ ಬಗ್ಗೆ ಅಭಿಮಾನ.
- ತಾಲೂಕ ಕಛೇರಿ, ಖಜಾನೆ ಲೂಟಿ ಈತನ ಮುಖ್ಯ ಉದ್ದೇಶ.
- ಬ್ರಿಟಿಷರಿಂದ ರಾಯಣ್ಣನ ಬಂಧನಕ್ಕೆ ಸಂಚು.
- ಕೃಷ್ಣರಾಯನಿಂದ ಸಂಚಿಗೆ ಕೈಜೋಡಣೆ.
- ನಂದಗಡದಲ್ಲಿ ರಾಯಣ್ಣನಿಗೆ ಗಲ್ಲುಶಿಕ್ಷೆ.

**27) ಸ್ವತಂತ್ರ ಭಾರತದ ಅಭಿವೃದ್ಧಿಗೆ ಜವಹರಲಾಲ ನೆಹರು ನೀಡಿರುವ ಕೊಡುಗೆಗಳನ್ನು ವಿವರಿಸಿರಿ**

- ಭಾರತದ ಮೊದಲ ಪ್ರಧಾನಮಂತ್ರಿ.
- ಕೈಗಾರೀಕರಣ ಮತ್ತು ನವಭಾರತದ ಶಿಲ್ಪಿ.
- ಪಟೇಲ್‌ರ ಜೊತೆಗೂಡಿ ದೇಶೀಯ ಸಂಸ್ಥಾನಗಳ ವಿಲೀನ.
- ಭಾಷಾವಾರು ಪ್ರಾಂತ್ಯಗಳ ರಚನೆ.
- ಮಿಶ್ರ ಆರ್ಥಿಕ ನೀತಿಗೆ ಭದ್ರ–ಬುನಾದಿ.
- ಪಂಚವಾರ್ಷಿಕ ಯೋಜನೆ ಜಾರಿ.
- ಅಲಿಪ್ತ ನೀತಿಯ ಹರಿಕಾರ.
- ಗ್ರಾಮೀಣಾಭಿವೃದ್ಧಿಗೆ ಒತ್ತು.
- ಪಂಚಶೀಲ ತತ್ವಗಳಿಗೆ ಸಹಿ.

**28) ಅಂತರಾಷ್ಟ್ರೀಯ ಕಾರ್ಮಿಕ ಸಂಘ ಕಾರ್ಮಿಕರ ಹಿತವನ್ನು ಹೇಗೆ ಕಾಪಾಡುತ್ತದೆ?**

- ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಸ್ಥಾಪನೆ.
- ಕಾರ್ಮಿಕ ವರ್ಗದ ಸಾಮಾಜಿಕ ಭದ್ರತೆ.
- ಕಾರ್ಮಿಕರ ಆರೋಗ್ಯ ಸಂರಕ್ಷಣೆ.
- ಕಾರ್ಮಿಕರ ಜೀವನ ಮಟ್ಟ ಸುಧಾರಣೆ.
- ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯ.
- ಕನಿಷ್ಠ ವೇತನ ಜಾರಿ.
- ವಸತಿ ನಿರ್ಮಾಣ.
- ಕಾರ್ಮಿಕರ ಹಿತಾಸಕ್ತಿ ರಕ್ಷಣೆ.

**29) ಸಂಘಟಿತ ಮತ್ತು ಅಸಂಘಟಿತ ವಲಯದ ಕೆಲಸಗಾರರ ನಡುವಿನ ವ್ಯತ್ಯಾಸ ತಿಳಿಸಿ.**

| ಸಂಘಟಿತ ದುಡಿಮೆಗಾರರು | ಅಸಂಘಟಿತ ದುಡಿಮೆಗಾರರು |
|---|---|
| • ಕಾನೂನಿನ ನಿಯಂತ್ರಣ. | • ಕಾನೂನಿನ ಅನಿಯಂತ್ರಣ |
| • ನಿಗದಿತ ವೇತನ. | • ನಿಗದಿತ ವೇತನವಿಲ್ಲ |
| • ಉದ್ಯೋಗದ ಭದ್ರತೆ. | • ಉದ್ಯೋಗದ ಅಭದ್ರತೆ |
| • ಕೆಲಸದ ನಿಶ್ಚಿತ ನಿಯಮಗಳು. | • ಕೆಲಸದ ನಿಯಮಗಳಿಲ್ಲ. |
| • ವಿಶೇಷ ಸೌಲಭ್ಯ, ಭತ್ಯೆಗಳು. | • ವಿಶೇಷ ಸೌಲಭ್ಯ, ಭತ್ಯೆಗಳಿಲ್ಲ. |

**30) ಉತ್ತರದ ಮಹಾ ಮೈದಾನದ ವಿಶಿಷ್ಟತೆಗಳೇನು?**

- ಇದನ್ನು ಸಟ್ಲೇಜ್ ಗಂಗಾ ಮೈದಾನ ಎನ್ನುವರು.
- ಹಿಮಾಲಯ &ಪರ್ಯಾಯ ಪ್ರಸ್ಥಭೂಮಿ ಮಧ್ಯೆ ವಿಸ್ತಾರ.
- ಸಿಂಧೂ ನದಿ ಮೈದಾನದಿಂದ ಬ್ರಹ್ಮಪುತ್ರ ನದಿ ಕಣಿವೆವರೆಗೂ ಹರಡಿದೆ.
- 2400 ಕಿ.ಮೀ. ಉದ್ದವಿದೆ.
- 70 – 500 ಕಿ.ಮೀ. ಅಗಲ.
- ಸಮತಟ್ಟಾದ ಮೈದಾನ.
- ನದಿ ಸಂಚಯನ ಮೈದಾನ.

**31) ಭಾರತದ ಸ್ವಾಭಾವಿಕ ಸಸ್ಯವರ್ಗದ ವಿಧಗಳನ್ನು ಪಟ್ಟಿಮಾಡಿರಿ.**

- ನಿತ್ಯಹರಿದ್ವರ್ಣದ ಅರಣ್ಯಗಳು.
- ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು.
- ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು.
- ಮ್ಯಾಂಗ್ರೋವ್ ಅರಣ್ಯಗಳು.
- ಮರಭೂಮಿ ಅರಣ್ಯಗಳು.
- ಹಿಮಾಲಯದ ಆಲ್ಪೈನ್ ಅರಣ್ಯಗಳು.

**ಅಥವಾ**

**ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಭಾರತವು ಸ್ವಾವಲಂಬನೆ ಸಾಧಿಸಿದೆ. ವಿವರಿಸಿರಿ.**

- ನೀರಾವರಿ ವಿಸ್ತರಣೆ.
- ಆಧುನಿಕ ಯಂತ್ರೋಪಕರಣ.
- ರಾಸಾಯನಿಕ ಗೊಬ್ಬರ.
- ಅಧಿಕ ಇಳುವರಿ ಕೊಡುವ ತಳಿಗಳು.
- ಕ್ರಿಮಿನಾಶಕ.
- ರೋಗನಾಶಕ.
- ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ.

**32) ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವನ್ನು ವಿವರಿಸಿರಿ.**

- ಮಹಿಳಾ ಸಬಲೀಕರಣ.
- ಬಡ ಮಹಿಳೆಯರ ಸಂಘಟನೆ.
- ಆರ್ಥಿಕ ಸ್ವಾವಲಂಬನೆ.
- ಉತ್ಪಾದಕ ಚಟುವಟಿಕೆಗಳಲ್ಲಿ ಭಾಗಿ.
- ಉಳಿತಾಯ ಸಂಗ್ರಹ.
- ಸಾಲ ವಸೂಲಾತಿಯಲ್ಲಿ ಸಾಧನೆ.
- ಸಾಮಾಜಿಕ ಪಿಡುಗುಗಳ ನಿರ್ಮೂಲನೆ.
- ಸ್ವಚ್ಛ & ಪ್ರಗತಿಪರ ಸಮಾಜ ನಿರ್ಮಾಣ.

**ಅಥವಾ**

**ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳು ಯಾವುವು?**

- ಭೀಕರ ಬರಗಾಲ.
- ಕೃಷಿ ಉತ್ಪಾದನೆ ಕುಸಿತ.
- ಅಹಾರ ಧಾನ್ಯಗಳ ಕೊರತೆ.
- ಹೆಚ್ಚು ಇಳುವರಿ ಗೋಧಿ ತಳಿ ಸಂಶೋಧನೆ.
- ರಾಸಾಯನಿಕ ಗೊಬ್ಬರಗಳ ಬಳಕೆ.
- ಜೈವಿಕ ಕ್ರಿಮಿನಾಶಕಗಳ ಬಳಕೆ.
- ಅಧಿಕ ಇಳುವರಿ ಬೀಜಗಳ ಬಳಕೆ.

**33) ಚಾಲ್ತಿ ಖಾತೆ, ಉಳಿತಾಯ ಖಾತೆಗಿಂತ ಹೇಗೆ ಭಿನ್ನವಾಗಿದೆ?**

| ಉಳಿತಾಯ ಖಾತೆ | ಚಾಲ್ತಿ ಖಾತೆ |
|---|---|
| • ವೇತನದಾರರಿಗೆ ಸೂಕ್ತ. | • ವ್ಯಾಪಾರಸ್ಥರಿಗೆ ಸೂಕ್ತ. |
| • ವಿದ್ಯಾರ್ಥಿಗಳಿಗಳಿಗೆ, ಹಿರಿಯ ನಾಗರಿಕರಿಗೆ ಅನುಕೂಲ. | • ವಾಣಿಜ್ಯ, ಔದ್ಯೋಗಿಕ ಸಂಸ್ಥೆಯವರಿಗೆ ಅನುಕೂಲ. |
| • ಗರಿಷ್ಠ ಮೊತ್ತಕ್ಕೆ ಪರಿಮಿತಿ ಇಲ್ಲ. | • ಸೇವೆಗೆ ಸೇವಾಶುಲ್ಕ ವಸೂಲಿ. |
| • ದಿನಕ್ಕೆ ನಿರ್ದಿಷ್ಟ ವ್ಯವಹಾರ. | • ದಿನಕ್ಕೆ ಅಧಿಕ ಬಾರಿ ವ್ಯವಹಾರ. |
| • ಉಳಿತಾಯಕ್ಕೆ ಸಹಾಯಕ. | • ವ್ಯವಹಾರಕ್ಕೆ ಸಹಾಯಕ. |

**ಅಥವಾ**

**ಉದ್ಯಮಿಯ ಕಾರ್ಯಗಳಾವುವು?**

- ಯೋಜನೆಗಳ ಮೂಲಕ ವ್ಯಾಪಾರ ಚಟುವಟಿಕೆ ಆರಂಭ.
- ಉತ್ಪಾದನಾಂಗಗಳ ಸಂಯೋಜನೆ.
- ಉತ್ಪಾದಿಸುವ ವಸ್ತು, ತಾಂತ್ರಿಕತೆ, ಮಾರುಕಟ್ಟೆ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
- ಎಲ್ಲ ಅಂಶಗಳ ಸಮಂಜಸ ಸಂಯೋಜನೆ.
- ಹೊಸ ವಿಧಾನಗಳ ಬಳಕೆ.
- ಉದ್ಯಮದ ಹಣಕಾಸಿನ ಆಯವ್ಯಯ ನಿರ್ವಹಣೆ.
- ಹಣಕಾಸಿನ ಆಯವ್ಯಯ ನಿರ್ವಹಣೆ.
- ಕಷ್ಟನಷ್ಟ ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತಾನೆ.
- ಉದ್ಯಮ ಸರಿಯಾಗಿ ಸಾಗುವಂತೆ ಮಾರ್ಗದರ್ಶನ.

**V ಎಂಟು–ಹತ್ತು ವಾಕ್ಯದಲ್ಲಿ ಉತ್ತರಿಸಿರಿ. 4*4=16**

**34) ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸ್‌ರ ಪಾತ್ರವೇನು?**

- ಸ್ವಾತಂತ್ರ್ಯ ಕ್ಕಾಗಿ ಜೀವನ ಮುಡುಪು.
- ನೇತಾಜಿ ಎಂದು ಖ್ಯಾತಿ ಪಡೆದಿದ್ದಾರೆ.
- ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪನೆ.
- ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ.
- ತ್ರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ.(1938)
- ಫಾರ್ವರ್ಡ್ ಬ್ಲಾಕ್ ಪಕ್ಷ ಸ್ಥಾಪನೆ.
- ಸ್ವಾತಂತ್ರ್ಯಕ್ಕಾಗಿ ಗೃಹ ಬಂಧನ.
- ಹಿಟ್ಲರ್‌ನಿಂದ ಸಹಾಯ ಯಾಚನೆ.
- ಅಜಾದ್ ಹಿಂದ್ ರೇಡಿಯೋ ಮೂಲಕ ಭಾಷಣ.
- ಐ.ಎನ್.ಎ ಸೈನ್ಯದ ಮುಖಂಡತ್ವ.
- ದೆಹಲಿ ಚಲೋ ಕರೆ.
- ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ ಎಂದು ಕರೆ.
- ವಿಮಾನ ಅಪಘಾತದಲ್ಲಿ ಮರಣ.

**35) ಬ್ರಿಟಿಷ ಶಿಕ್ಷಣ ವ್ಯವಸ್ಥೆಯು ಅಭಿವೃದ್ಧಿಶೀಲ ಆಲೋಚನೆ – ಗಳನ್ನೊಳಗೊಂಡ ಒಂದು ಹೊಸ ತಲೆಮಾರನ್ನು ಸೃಷ್ಟಿಸಿತು ಸಮರ್ಥಿಸಿ.**

- ಭಾರತೀಯರಿಗೆ ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ ಪರಿಕಲ್ಪನೆ ಪರಿಚಯ.
- ಭಾರತೀಯರಲ್ಲಿ ರಾಷ್ಟ್ರೀಯವಾದ ಮನೋಭಾವ ಬೆಳವಣಿಗೆ.
- ಸ್ಥಳೀಯ ಭಾಷೆ, ಸಾಹಿತ್ಯ ರಚನೆಗೆ ಪ್ರೋತ್ಸಾಹ.
- ವೃತ್ತ ಪತ್ರಿಕೆಗಳ ಉದಯ ಮತ್ತು ಬೆಳವಣಿಗೆ.
- ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳವಣಿಗೆ.
- ಸ್ವಾತಂತ್ರ ಚಳುವಳಿಯ ಮೇಲೆ ಪ್ರಭಾವ.
- ಸಾಮಾಜಿಕ & ಧಾರ್ಮಿಕ ಸುಧಾರಣಾ ಚಳುವಳಿ ಆರಂಭ
- ಭಾರತೀಯರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ.
- ಭಾರತೀಯರಲ್ಲಿ ಸಮ್ಮೃದ್ಧ ಸಾಂಸ್ಕೃತಿಕ ಪರಂಪರೆ ಅರಿವು.
- ಹೊಸ ತಲೆಮಾರು ಸೃಷ್ಟಿ.

**ಅಥವಾ**

**ಮಹಲ್ವಾರಿ ಪದ್ಧತಿಗಿಂತ ರೈತವಾರಿ ಪದ್ಧತಿ ಭಿನ್ನ. ಹೇಗೆ?**

| ಮಹಲ್ವಾರಿ ಪದ್ಧತಿ | ರೈತವಾರಿ ಪದ್ಧತಿ |
|---|---|
| • ಉತ್ತರ ಪ್ರದೇಶ, ದೆಹಲಿ, ಪಂಜಾಬ್ ಪ್ರಾಂತ್ಯಗಳಲ್ಲಿ ಜಾರಿ.<br>• ಆರ್ ಎಮ್ ಬರ್ಡ್& ಜೇಮ್ಸ್ ಥಾಮ್ಸನ್‌ರಿಂದ ಪ್ರಯೋಗ.<br>• ಮಹಲ್ ಎಂದರೆ ತಾಲೂಕು ಎಂದರ್ಥ.<br>• ಅನುಷ್ಠಾನದಲ್ಲಿ ಪ್ಯಾಂತದಿಂದ ಪ್ರಾಂತಕ್ಕೆ ಭಿನ್ನವಾಗಿತ್ತು.<br>• ಅಧಿಕಾರಿಗಳಿಂದ ಉತ್ಪಾದನೆಗಿಂತ ಅಧಿಕ ವಾರ್ಷಿಕ ಪಾವತಿ ನಿರ್ಧಾರ. | • ಅಲೆಕ್ಸಾಂಡರ್ ರೀಡ್‌ನು ಬಾರಮಹಲ್ ಪ್ರಾಂತದಲ್ಲಿ ಜಾರಿಗೆ ತಂದನು.<br>• ಥಾಮಸ್ ಮನ್ರೊನಿಂದ ಮದರಾಸ, ಮೈಸೂರು ಪ್ರಾಂತಗಳಲ್ಲಿ ಜಾರಿ.<br>• ಸರಕಾರ ಮತ್ತು ರೈತರ ನಡುವೆ ನೇರ ಸಂಪರ್ಕ.<br>• ಭೂಮಿ ಉಳುವವನೇ ಭೂ ಒಡೆಯ.<br>• ರೈತರಿಂದ ಸರ್ಕಾರಕ್ಕೆ ನೇರವಾಗಿ ತೆರಿಗೆ ಪಾವತಿ.<br>• ಉತ್ಪನ್ನದ 50% ರಷ್ಟು ತೆರಿಗೆ ಸಲ್ಲಿಕೆಗೆ ಅವಕಾಶ. |

**36) ಭ್ರಷ್ಟಾಚಾರ ಒಂದು ಸಾಮಾಜಿಕ ಪಿಡುಗು. ಹೇಗೆ?**

- ಸಾರ್ವಜನಿಕ & ವೈಯಕ್ತಿಕ ನಕಾರಾತ್ಮಕ ಪರಿಣಾಮ.
- ಸಮಾಜ, ಆರ್ಥಿಕತೆಗೆ ಅಭದ್ರತೆ.
- ಸಮಾಜ ವಿರೋಧಿ ಚಟುವಟಿಕೆ.
- ರಾಜಕೀಯ ದುಷ್ಪರಿಣಾಮ.
- ಅನೈತಿಕ ಚಟುವಟಿಕೆಗಳಿಗೆ ಕಾರಣ.
- ವ್ಯವಸ್ಥಿತ ಅಪರಾಧಕ್ಕೆ ಅವಕಾಶ.
- ಅಧಿಕಾರಶಾಹಿಯಲ್ಲಿ ಲೋಪದೋಷ.
- ವಂಚನೆಗೂ ಅನುವು.
- ಸ್ವಜನ ಪಕ್ಷಪಾತ.
- ಲಂಚಗುಳಿತನ.
- ಉದ್ದೇಶಪೂರ್ವಕ ಮುಂದುಡೂಕೆ.

**37) ಮೆಕ್ಕಲು ಮಣ್ಣು, ಮರಭೂಮಿ ಮಣ್ಣಿಗಿಂತ ಹೇಗೆ ಭಿನ್ನ?**

| ಮೆಕ್ಕಲು ಮಣ್ಣು | ಮರಭೂಮಿ ಮಣ್ಣು |
|---|---|
| • ನದಿಗಳ ಸಂಚಯನ ಕಾರ್ಯದಿಂದ ಉತ್ಪತ್ತಿ.<br>• 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ವಿಸ್ತಾರ.<br>• ಉತ್ತರ ಪ್ರದೇಶ, ಬಿಹಾರ, ಪಂಜಾಬಗಳಲ್ಲಿ ಹಂಚಿಕೆ.<br>• ಭತ್ತ, ಕಬ್ಬು ಬೆಳೆಗೆ ಸೂಕ್ತ.<br>• ಅಧಿಕ ವಿಸ್ತಾರ ಪ್ರದೇಶದಲ್ಲಿ ಹರಡಿದೆ. | • ಅತಿ ಕಡಿಮೆ ಮಳೆ, ಅಧಿಕ ಉಷ್ಣಾಂಶ ಪ್ರದೇಶದಲ್ಲಿ ಉತ್ಪತ್ತಿ.<br>• ಕೆಂಪು ಮತ್ತು ಕಂದು ಬಣ್ಣ ಹೊಂದಿದೆ<br>• ಕಡಿಮೆ ಆದ್ರತೆಯಿಂದ ಕೂಡಿದೆ.<br>• ಸಜ್ಜೆ, ಖರ್ಜೂರ ಬೆಳೆಗೆ ಸೂಕ್ತ<br>• 1.4 ಲಕ್ಷ ಚ.ಕಿ.ಮೀನಲ್ಲಿ ವಿಸ್ತಾರ. |

**VI 38) ಭಾರತದ ಅಂದವಾದ ನಕ್ಷೆ ಬಿಡಿಸಿ ಎ. ವಿಶಾಖಪಟ್ಟಣ ಬಿ. ರೊರ್ಕೆಲಾ ಸಿ. ಕಾಂಡ್ಲಾ ಡಿ. ರಾಣಾಪ್ರತಾಪ ಸಾಗರ ಗುರುತಿಸಿರಿ.**

1+4=5

